ಚಿಕ್ಕೋಡಿ ತಾಲ್ಲೂಕಿನ ಪಶುಸಂಗೋಪನಾ ಆಸ್ಪತ್ರೆಗಳಲ್ಲಿ ಖಾಲಿ ಇರುವ ವೈದ್ಯರು ಹಾಗೂ ನೌಕರರ ಹುದ್ದೆಗಳು

1277 (1518) ಶ್ರೀ ಕಟ್ಟಿಮನಿ ಮನೋಹರ ಶಿವಪುತ್ರ (ಚಿಕ್ಕೋಡಿ) : ಮಾನ್ಯ ಪಶುಸಂಗೋಪನಾ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಚಿಕ್ಕೋಡಿ ತಾಲ್ಲೂಕಿನ ಯಾವ ಯಾವ ಪಶುಸಂಗೋಪನಾ ಆಸ್ಪತ್ರೆಗಳಲ್ಲಿ ಖಾಲಿ ಇರುವ ವೈದ್ಯರು ಹಾಗೂ ನೌಕರರ ಹುದ್ದೆಗಳೆಷ್ಟು;

ಆ) ಈ ಹುದ್ದೆಗಳನ್ನು ಇದುವರೆವಿಗೂ ಖಾಲಿಬಿಡಲು ಕಾರಣಗಳೇನು;

ಇ) ಚಿಕ್ಕೋಡಿ ತಾಲ್ಲೂಕಿನ ಪಶುವೈದ್ಯ ಶಾಲೆಗಳಿಗೆ ಔಷಧಿಗಳಿಗೆ ಪೂರ್ಣ ಕೊರತೆ ಇರುವುದು ಸರ್ಕಾರಕ್ಕೆ ಗೊತ್ತಿದೆಯೇ;

ಈ) ಹಾಗಿದ್ದಲ್ಲಿ ಈ ದಿಸೆಯಲ್ಲಿ ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಎ. ಕೃಷ್ಣಪ್ಪ (ಪಶುಸಂಗೋಪನಾ ಮತ್ತು ಸಕ್ಕರೆ ಸಚಿವರು) :

ಅ) ಯಾವುದು ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಜಿಲ್ಲಾ ಪಂಚಾಯತ್ ಮತ್ತು ಕುರಿ ಮಂಡಳಿಯು ಅನುಕ್ರಮವಾಗಿ ರೂ. 8. 18 ಲಕ್ಷಗಳು ಹಾಗೂ ರೂ. 17.03 ಲಕ್ಷಗಳನ್ನು ಬೆಳಗಾಂ ಜಿಲ್ಲೆಗೆ 1999-2000ನೇ ಸಾಲಿನಲ್ಲಿ ವಿತರಿಸಲಾಗಿದೆ.

ಈ) ಈ ವರ್ಷ ಪೂರೈಕೆಯನ್ನು ಹೆಚ್ಚಿಸಲು ಪ್ರಯತ್ನಿಸಲಾಗುವುದು.

ಕುಮಟಾ ತಾಲ್ಲೂಕು ಬ್ರಹ್ಮಾವರದಲ್ಲಿ ಅರಣ್ಯ ಭೂಮಿಯನ್ನು ಒತ್ತುವರಿ ಮಾಡಿ ಕೊಂಡಿರುವುದು.

1278 (1651) ಶ್ರೀ ಕಟ್ಟೀಮನಿ ಮನೋಹರ ಶಿವಪುತ್ರ (ಚಿಕ್ಕೋಡಿ) : ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕುಮಟಾ ತಾಲ್ಲೂಕು ಬ್ರಹ್ಮಾವರದಲ್ಲಿ ಸಾರ್ವಜನಿಕರು ಅರಣ್ಯ ಭೂಮಿಯನ್ನು ಅತಿಕ್ರಮಣ ಮಾಡಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಅತಿಕ್ರಮಣ ಮಾಡಿಕೊಂಡಿರುವ ಭೂಮಿಯ ವಿಸ್ತೀರ್ಣ ಎಷ್ಟು? ಅತಿಕ್ರಮಣ ಮಾಡಿಕೊಂಡಿರುವ ಜನರೆಷ್ಟು? ಇದರಲ್ಲಿ 5 ಎಕರೆ ಭೂಮಿಗೂ ಮೇಲ್ಪಟ್ಟು ಅತಿಕ್ರಮಣ ಮಾಡಿಕೊಂಡಿರುವವರ ಸಂಖ್ಯೆ ಎಷ್ಟು?

ಇ) ಅರಣ್ಯ ಭೂಮಿಯನ್ನು ಅತಿಕ್ರಮಣ ಮಾಡಿಕೊಂಡಿರುವ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಈ) ಕೈಗೊಂಡಿದ್ದರೆ ಅತಿಕ್ರಮಣ ಸಾಗುವಳಿದಾರರಿಗೆ ಕಾನೂನಿನಂತೆ ಯಾವ ಕ್ರಮ ಕೈಗೊಳ್ಳಲಾಗಿದೆ?

ಉ) ಕ್ರಮ ಕೈಗೊಳ್ಳುವಲ್ಲಿ ತಾರತಮ್ಯ ಉಂಟಾಗಿರುವ ಬಗ್ಗೆ ಸರ್ಕಾರಕ್ಕೆ ತಿಳಿದಿದೆಯೆ? ಅಂದರೆ ಅತಿ ಕಡಿಮೆ ಹಿಡುವಳಿದಾರರಿಗೆ ಅತಿಕ್ರಮಣ ಭೂಮಿ ವಶಪಡಿಸಿಕೊಳ್ಳಲು ಕ್ರಮ ಕೈಗೊಂಡಿದ್ದಾರೆಂದು ಆಕ್ಷೇಪಣೆಗಳಿರುವ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಕೆ.ಎಚ್.ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :

ಅ) ಹೌದು.

ಆ) ಅತಿಕ್ರಮಣ ಮಾಡಿರುವ ಭೂಮಿಯ ವಿಸ್ತೀರ್ಣ 60 ಎಕರೆ (25.5ಹೆ) ಅತಿಕ್ರಮಣ ಮಾಡಿರುವ ಜನರ ಸಂಖ್ಯೆ: 41. ಐದು ಎಕರೆಗಿಂತಲೂ ಮೇಲ್ಪಟ್ಟು ಅತಿಕ್ರಮಣ ಮಾಡಿರುವವರು ಇರುವುದಿಲ್ಲ.

ಇ) ಕೇಂದ್ರ ಸರ್ಕಾರದಿಂದ ಅರಣ್ಯ ಸಂರಕ್ಷಣಾ ಕಾಯ್ದೆ, 1980ರಂತೆ ದಿನಾಂಕ:27.4.78ರ ಪೂರ್ವದಲ್ಲಿ ಒತ್ತುವರಿಯಾಗಿರುವ ಅರಣ್ಯ ಪ್ರದೇಶಗಳನ್ನು ಸಕ್ರಮಗೊಳಿಸಿ, ಆದೇಶ ಹೊರಡಿಸಿದ ನಂತರ ರಾಜ್ಯ ಸರ್ಕಾರವೂ ಸಹ ಆದೇಶ ಸಂಖ್ಯೆ: ಅಪಜೀ 5 ಎಫ್‌ಜಿಎಲ್ 90, ದಿನಾಂಕ: 5.5.97ರಲ್ಲಿ ಕೆಲವು ನಿಬಂಧನಗೊಳಪಟ್ಟು ಆದೇಶ ಹೊರಡಿಸಿರುತ್ತದೆ. ಹಾಗೂ ದಿನಾಂಕ:27.4.78ರ ಪೂರ್ವದ ಎಲ್ಲಾ ಅನರ್ಹ ಹಾಗೂ ಆ ನಂತರದ ಅತಿಕ್ರಮಣವನ್ನು ತೆರವುಗೊಳಿಸಲೂ ಸಹ ಆದೇಶ ಹೊರಡಿಸಿರುತ್ತದೆ.

ಈ) ದಿನಾಂಕ: 5.5.97ರಲ್ಲಿ ಸರ್ಕಾರವು ವಿಧಿಸಿರುವ ಷರತ್ತುಗಳನ್ನು ಪೂರೈಸಿಕೊಂಡ ಮೇಲೆ ಕಂದಾಯ ಇಲಾಖೆಯವರು ಪಟ್ಟಾವನ್ನು (ಹಕ್ಕುಪತ್ರ) ವಿತರಿಸುವರು. ಕರ್ನಾಟಕ ಅರಣ್ಯ ಕಾಯ್ದೆ, 1963ರ ಕಲಂ 64(ಎ)ರ ಪ್ರಕಾರ ಎಲ್ಲಾ ಅನರ್ಹ ಅತಿಕ್ರಮಣಗಳನ್ನು ಖುಲ್ಲಾಪಡಿಸಲಾಗುತ್ತಿದೆ ಮತ್ತು ಈ ಕ್ರಮ ಪ್ರಗತಿಯಲ್ಲಿದೆ.

ಉ) ಇದು ನಿಜವಲ್ಲ, ಸರ್ಕಾರಿ ಆದೇಶ ದಿನಾಂ: 5.5.97ರ ಪ್ರಕಾರ ಕ್ರಮ ತೆಗೆದು ಕೊಳ್ಳಲಾಗುತ್ತಿದೆ.

ದೇವಿ ಸಕ್ಕರೆ ಕಾರ್ಖಾನೆಯ ನೌಕರರ ರಕ್ಷಣೆ

1279 (1485) ಶ್ರೀ ಕರಿಯಣ್ಣ (ಹೊಳೆಹೊನ್ನೂರು) : ಮಾನ್ಯ ಪಶುಸಂಗೋಪನಾ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದೇವಿ ಸಕ್ಕರೆ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿರುವ ನೌಕರರಿಗೆ (ಸಕ್ಕರೆ ಕಾರ್ಖಾನೆ ಇದುವರೆಗೆ ಪ್ರಾರಂಭವಾಗದೆ ಇರುವುದರಿಂದ) ಸರ್ಕಾರ ಯಾವ ರೀತಿಯ ರಕ್ಷಣೆ ನೀಡುತ್ತೆ ತಿಳಿಸಿ;

ಆ) ಈ ಸಕ್ಕರೆ ಕಾರ್ಖಾನೆಯಿಂದ ರೈತರಿಗೆ ಕಬ್ಬಿನ ಹಣ ಸಹ ಬಂದಿರುವುದಿಲ್ಲ, ಇದನ್ನು ಕೊಡಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?